ಅ) ರಾಜ್ಯ ಪುನರ್ವಿಂಗಡಣಾ ಆಯೋಗಗಳ ವರದಿ ಪ್ರಕಾರ ಹೊಸ ಜಿಲ್ಲೆ ಹಾಗೂ ತಾಲ್ಲೂಕುಗಳ ರಚನೆ ಕುರಿತು ಯಾವಾಗ ಸರ್ಕಾರದ ಅಂತಿಮ ಪರಿಶೀಲನೆ ಮುಗಿಯುವುದು ಹಾಗೂ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು?

ಆ) ಶಿಫಾರಸ್ಸಿನ ಪ್ರಕಾರ ಹೊಸ ಜಿಲ್ಲೆ ತಾಲ್ಲೂಕುಗಳ ರಚನೆಗೆ ತೊಡಕುಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಆರ್ಥಿಕ ಮುಗ್ಗಟ್ಟಿನ ಹೊರತು ಹೆಚ್ಚಿನ ಅಡೆತಡೆಗಳೇನಿಲ್ಲ.

ಅರಣ್ಯ ಇಲಾಖೆಯ ಪ್ಲಾಂಟೇಷನ್ ಕಾರ್ಮಿಕರಿಗೆ ನೇರ ಪಾವತಿ ಜಾರಿಗೆ ತಂದಿರುವ ಬಗ್ಗೆ

3628 - ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಪ್ಲಾಂಟೇಷನ್ ಕೆಲಸಗಾರರಿಗೆ ನೇರಪಾವತಿ ಪದ್ಧತಿ ಜಾರಿಗೆ ಎಂದಿನಿಂದ ಬಂದಿದೆ ಹಾಗೂ ಅದಕ್ಕೆ ಕಾರಣಗಳೇನು?

ಆ) ನೇರಪಾವತಿ ವ್ಯವಸ್ಥೆ ಇದ್ದರೂ, ಕೆಲಸದ ಮೇಲ್ವಿಚಾರಣೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಹಾಗೂ ಈ ಹೊಣೆಗಾರಿಕೆ ಎಷ್ಟರಮಟ್ಟಿಗೆ ಯಶಸ್ವಿ ಆಗಿದೆ?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಈ ನೇರಪಾವತಿ ಪದ್ಧತಿಯು ದಿನಾಂಕ 16-7-90ರಿಂದ ಜಾರಿಗೆ ಬಂದಿರುತ್ತದೆ. ಇದಕ್ಕೆ ಕಾರಣವೇನೆಂದರೆ ಪ್ಲಾಂಟೇಷನ್ ಕೆಲಸಗಾರರಿಗೆ ಅವರು ತಿಂಗಳಲ್ಲಿ ಕೆಲಸ ಮಾಡಿದ ದಿವಸಗಳಿಗೆ ನಿಗದಿಯಾದ ದಿನಗೂಲಿ ಸಕಾಲಕ್ಕೆ ಮತ್ತು ಸರಿಯಾಗಿ ಹಾಗೂ ಸಂಬಂಧಪಟ್ಟವರಿಗೆ ಹಾಲಿ ನಿಯಮದ ರೀತ್ಯಾ ನೇರ ಪಾವತಿಯಾಗಬೇಕೆಂಬ ಉದ್ದೇಶದಿಂದ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಆ) ಕೆಲಸದ ಮೇಲ್ವಿಚಾರಣೆಗೆ ಇಲಾಖೆಯ ಅಧಿಕಾರಿಗಳನ್ನು ಅಂದರೆ ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರುಗಳನ್ನೇ ಮೇಲ್ವಿಚಾರಣೆಗೆ ಹೊಣೆಗಾರರನ್ನಾಗಿ ಮಾಡಲಾಗಿದೆ. ಈ ಹೊಣೆಗಾರಿಕೆಯನ್ನು ಸರಕಾರ, ಸಾರ್ವಜನಿಕ ಮತ್ತು ಕೆಲಸಗಾರರ ಹಿತದೃಷ್ಟಿಯಿಂದ ಮಾಡಿದ್ದು, ಈ ಕಾರ್ಯ ತೃಪ್ತಿಕರವಾಗಿ ನಡೆಯುತ್ತಿದೆ.

ರಾಜ್ಯದ ರೈತರಿಗೆ ಪಾಸ್ ಪುಸ್ತಕ ವಿತರಣೆ

3662 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆಲ್ಲ ಅವರ ಭೂಮಿಯ ವಿವರಗಳನ್ನೊಳಗೊಂಡ ಪಾಸು ಪುಸ್ತಕಗಳನ್ನು ವಿತರಿಸುವ ಕಾರ್ಯವನ್ನು ಸರ್ಕಾರ ಹಮ್ಮಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈವರೆವಿಗೆ ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪಾಸು ಪುಸ್ತಕಗಳನ್ನು ವಿತರಿಸಲಾಗಿದೆ? (ತಾಲ್ಲೂಕುವಾರು ವಿವರವನ್ನೊದಗಿಸುವುದು)

ಇ) ರೈತರಿಗೆ ಪಾಸು ಪುಸ್ತಕಗಳನ್ನು ಒದಗಿಸುವ ಕಾರ್ಯ ತುಂಬಾ ನಿಧಾನಗತಿಯಲ್ಲಿ ಸಾಗುತ್ತಿರುವುದು ನಿಜವಾಗಿದೆ?